# ಬೇಲೂರು ಮಠದಲ್ಲಿ ದುರ್ಗಾಪೂಜೆ -೨

–ಸ್ವಾಮಿ ಭಜನಾನಂದ

ಅನುವಾದ: ಡಾ. ಪಾಂಡುರಂಗ ವಿಠಲ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

## ಭಾಗ ಎರಡು : ಬೇಲೂರು ಮಠದಲ್ಲಿನ ದುರ್ಗಾಪೂಜೆ

೧೯೦೧ ರಲ್ಲಿ ಬೇಲೂರು ಮಠದಲ್ಲಿ ಮೊದಲ ಬಾರಿಗೆ ದುರ್ಗಾಪೂಜೆ ನಡೆಯಿತು. ಅನಂತರ ಕೆಲವು ವರ್ಷ ಪ್ರತಿಮಾ ಪೂಜೆಯಿರಲಿಲ್ಲವಾದರೂ ಪ್ರತಿ ವರ್ಷವೂ ದುರ್ಗಾಪೂಜೆ ನಡೆದುಬರುತ್ತಿದೆ. (ಬಾರಾನಗರದಲ್ಲಿ ರಾಮಕೃಷ್ಣ ಮಠದ ಆರಂಭದ ವರ್ಷಗಳಲ್ಲಿ ಶ್ರೀರಾಮಕೃಷ್ಣರ ಶಿಷ್ಯರು ಪ್ರತಿಮಾಪೂಜೆ ಇಲ್ಲದೆ ಸಣ್ಣ ಪ್ರಮಾಣದಲ್ಲಿ ದುರ್ಗಾಪೂಜೆಯನ್ನು ಆಚರಿಸುತ್ತಿದ್ದರೆಂಬುದನ್ನು ಇಲ್ಲಿ ನೆನೆಯಬಹುದು.) ಸ್ವಾಮಿ ವಿವೇಕಾನಂದರೇ ಬೇಲೂರು ಮಠದಲ್ಲಿ ಮೊದಲು ಪ್ರತಿಮೆಯನ್ನು ಇಟ್ಟು ದುರ್ಗಾಪೂಜೆಯನ್ನು ಆಚರಿಸಿದರು. ನಿಯಮದಂತೆ ಹಿಂದೂ ಸಂನ್ಯಾಸಿಗಳು ವಿಧಿವತ್ತಾಗಿ ಪೂಜೆಯನ್ನು ಆಚರಿಸುವಂತಿಲ್ಲ. ಇಂತಹ ನೂತನ ಸಂಪ್ರದಾಯವನ್ನು ಸ್ವಾಮಿಜಿ ಏಕೆ ಪ್ರಾರಂಭಿಸಿದರು?

ಸ್ವಾಮಿಜಿ ಮತ್ತು ಅವರ ಸಂನ್ಯಾಸಿ ಸಹೋದರರು ನಡೆಸುತ್ತಿದ್ದ ಹೊಸರೀತಿಯ ತ್ಯಾಗ ಜೀವನ ಹಾಗೂ ಸೇವಾಕಾರ್ಯಗಳಿಗೆ ಸಮಾಜದ ಅಂಗೀಕಾರ ಪಡೆಯುವುದೂ ಇದಕ್ಕೆ ಒಂದು ಕಾರಣ. ಸ್ವಾಮಿಜಿಯ ಸಮುದ್ರಯಾನ, ಜಾತಿಯ ಕಟ್ಟುಪಾಡುಗಳಿಗೆ ಬೆಲೆ ನೀಡದ, ಪಾಶ್ಚಿಮಾತ್ಯರೊಡನೆ ಮುಕ್ತವಾಗಿ ಬೆರೆಯುವ ಅಸಾಂಪ್ರದಾಯಿಕ ಜೀವನರೀತಿಗಳನ್ನು ಕೊಲ್ಕತಾದ ಹಿಂದೂ ಸಮಾಜ ಒಪ್ಪಿರಲಿಲ್ಲ. ದುರ್ಗಾಪೂಜೆಯ ಆಚರಣೆಯು ಹೊಸ ಸಂನ್ಯಾಸಿ ಸಂಘದ ಮೇಲೆ ಸ್ಥಳೀಯರಿಗಿದ್ದ ತಪ್ಪು ತಿಳುವಳಿಕೆ ಮತ್ತು ಶಂಕೆಗಳನ್ನು ದೂರ ಮಾಡಿತು.

ಹೆಣ್ತನದ ಪಾವಿತ್ರ್ಯ, ತಾಯ್ತನದ ದೈವತ್ವವನ್ನು ಗೌರವಿಸುವುದನ್ನು ಸಾಂಸ್ಥೀಕರಿಸುವುದು ಸ್ವಾಮಿಜಿಯ ಇನ್ನೊಂದು ಉದ್ದೇಶವಾಗಿತ್ತು. ಪಾಶ್ಚಿಮಾತ್ಯರು ಅಭಿವೃದ್ಧಿ ಹೊಂದಲು ಹೆಂಗಸರನ್ನು ಆ ದೇಶಗಳಲ್ಲಿ ಉನ್ನತೀಕರಿಸಿರುವುದೇ ಮುಖ್ಯ ಕಾರಣ; ಭಾರತ ಹಿಂದುಳಿಯಲು ಈ ದೇಶದಲ್ಲಿ ಹೆಂಗಸರನ್ನು ಕಡೆಗಣಿಸಿರುವುದೇ ಕಾರಣ ಎಂಬುದನ್ನು ಸ್ವಾಮಿಜಿ ಕಂಡಿದ್ದರು. ದೇವೀ ಪೂಜೆ, ಅದರಲ್ಲೂ ಕುಮಾರೀ ಪೂಜೆಯು ಹೆಂಗಸರಲ್ಲಿನ ಸುಪ್ತ ದೈವತ್ವದ ಬಗ್ಗೆ ಅರಿವು ಮೂಡಿಸಿ, ಅವರನ್ನು ಗೌರವದಿಂದ ಕಾಣುವಂತೆ ಮಾಡುವುದಾಗಿತ್ತು.

ಮೂರನೆಯ ಕಾರಣ ಅಲೌಕಿಕವಾದದ್ದು. ೧೯೦೧ರಲ್ಲಿ, ದುರ್ಗಾಪೂಜೆಗೆ ಕೆಲವು ದಿನ ಮೊದಲು ಸ್ವಾಮಿಜಿಗೆ ಬೇಲೂರು ಮಠದಲ್ಲಿ ದುರ್ಗಾಪೂಜೆ ನಡೆಯುತ್ತಿರುವಂತೆ ದರ್ಶನ ವಾಯಿತು. ಸುಮಾರಾಗಿ ಅದೇ ಸಮಯದಲ್ಲಿ ಸ್ವಾಮಿ ಬ್ರಹ್ಮಾನಂದಜಿಯವರಿಗೆ, ದಕ್ಷಿಣೇಶ್ವರದಿಂದ ಬೇಲೂರು ಮಠಕ್ಕೆ ತಾಯಿ ದುರ್ಗೆಯು ಗಂಗೆಯನ್ನು ಹಾದು ಬಂದಂತೆ ದರ್ಶನ ವಾಯಿತು. ಸ್ವಾಮಿಜಿ ಬ್ರಹ್ಮಾನಂದಜಿಯವರಿಗೆ ದುರ್ಗಾ ಪೂಜೆಯ ಸಿದ್ಧತೆಗಳನ್ನು ಕೂಡಲೇ ಮಾಡಿಕೊಳ್ಳುವಂತೆ ಹೇಳಿದರು. ಪೂಜೆಗೆ ಕೆಲವೇ ದಿನಗಳು ಉಳಿದಿದ್ದವು.

ಪೂಜೆಗೆ ಬೇಕಾದ ಜೇಡಿಮಣ್ಣಿನ ಪ್ರತಿಮೆ ದೊರೆಯುವುದೇ ಮುಖ್ಯ ಸಮಸ್ಯೆಯಾಯಿತು. ಕಾಮರ್‌ತುಲಿಯಲ್ಲಿ (ಕೊಲ್ಕತಾದಲ್ಲಿ ಜೇಡಿಮಣ್ಣಿನಿಂದ ಕಲಾಕಾರರು ಪ್ರತಿಮೆಗಳನ್ನು ಮಾಡುವ ಸ್ಥಳ) ವಿಚಾರಿಸಲಾಗಿ ಒಂದು ಅಂಗಡಿಯಲ್ಲಿ ಒಂದೇ ಒಂದು ಸುಂದರ ಪ್ರತಿಮೆ ಇರುವುದು ತಿಳಿಯಿತು. ಅದನ್ನು ಮಾಡಲು ಹೇಳಿದ್ದವರು ಸಮಯ ಮೀರಿದ್ದರೂ ಬರಲಿಲ್ಲವಾಗಿ, ಕಲಾಕಾರನು ಈ ಸಂನ್ಯಾಸಿಗಳಿಗೆ ಪ್ರತಿಮೆಯನ್ನು ಮಾರಲು ಒಪ್ಪಿದನು.

ವಿಜೃಂಭಣೆಯ ಸಾಂಪ್ರದಾಯಿಕ ಪೂಜೆಗಾಗಿ ಪ್ರತಿಮೆಯಲ್ಲದೆ ಇನ್ನೂ ಅನೇಕ ವಸ್ತುಗಳನ್ನು ಸಂಗ್ರಹಿಸಬೇಕಾಗಿತ್ತು. ಸ್ವಾಮಿ ಬ್ರಹ್ಮಾನಂದಜಿಯವರ ಸಮರ್ಥ ನಿರ್ದೇಶನದಲ್ಲಿ ಎಲ್ಲ ಏರ್ಪಾಡನ್ನು ಅತ್ಯಲ್ಪಕಾಲದಲ್ಲೇ ಚೆನ್ನಾಗಿ ಮಾಡಲಾಯಿತು. ಹಳೆಯ ದೇವಸ್ಥಾನದ ಉತ್ತರದ ಬಯಲಿನಲ್ಲಿ ದೊಡ್ಡ ಪೆಂಡಾಲನ್ನು ನಿರ್ಮಿಸಿ, ಬೇಲೂರು ಮಠದಲ್ಲಿ ಮೊದಲ ಬಾರಿಗೆ ದುರ್ಗಾ ಪೂಜೆಯನ್ನು ಆಚರಿಸಲಾಯಿತು. ೧೯೦೧ನೇ ಅಕ್ಟೋಬರ್ ೧೮ರ ಷಷ್ಠಿಯಂದು ನಾಂದಿ ಪೂಜೆ ಮಾಡಲಾಯಿತು. ಬ್ರಹ್ಮಚಾರಿ ಕೃಷ್ಣಲಾಲ್ ಪೂಜಾರಿಯಾಗಿ, ಶಶೀ ಮಹಾರಾಜರ ತಂದೆ ಈಶ್ವರಚಂದ್ರ ಚಕ್ರವರ್ತಿಯವರು ತಂತ್ರಧಾರಕರಾಗಿದ್ದರು. ದೇವಿಯನ್ನು ಸ್ವಾಗತಿಸುವ ಆಗಮನಿ ಹಾಡುಗಳನ್ನು ಸ್ವಾಮಿಜಿ, ಈಗ ಅವರ ದೇವಸ್ಥಾನದ ಎದುರಿಗಿರುವ, ಬೇಲದ ಮರದ ಕೆಳಗೆ ಕುಳಿತು ಹಾಡಿದರು. ಶ್ರೀರಾಮಕೃಷ್ಣರ ಗೃಹೀಭಕ್ತರು ಹಾಗೂ ಹತ್ತಿರದಲ್ಲಿದ್ದ ಆಚಾರಶೀಲ ಬ್ರಾಹ್ಮಣರನ್ನು ವಿಶೇಷವಾಗಿ ಆಮಂತ್ರಿಸಲಾಗಿತ್ತು. ಜಾತಿ–ಧರ್ಮಗಳ ಭಿನ್ನತೆಗಳನ್ನು ಬದಿಗೊತ್ತಿ ಸಹಸ್ರಾರು ಜನ ಈ ಮೂರು ದಿನಗಳ ಉತ್ಸವದಲ್ಲಿ ಪಾಲ್ಗೊಂಡರು. ನವಮಿಯ ರಾತ್ರಿ ಸ್ವಾಮಿಜಿ ದೇವಿಯನ್ನು ಸ್ತುತಿಸುವ ಅನೇಕ ಗೀತೆಗಳನ್ನು ಹಾಡಿದರು. ಅವುಗಳಲ್ಲಿ ಕೆಲವು ಶ್ರೀರಾಮಕೃಷ್ಣರು ಹಾಡುತ್ತಿದ್ದ ಹಾಡುಗಳೇ.

### ಶ್ರೀಮಾತೆ ಮತ್ತು ದುರ್ಗಾಪೂಜೆ

ಬೇಲೂರುಮಠದಲ್ಲಿ ದುರ್ಗಾಪೂಜೆಯನ್ನು ಆಚರಿಸಲು ನಿರ್ಧರಿಸಿದಾಗ ಮಾಡಿದ ಕೆಲಸಗಳಲ್ಲಿ ಮೊದಲಿನದು ಕೊಲ್ಕತಾದ ಬಾಗ್‌ಬಜಾರಿನಲ್ಲಿ ಆಗ ನೆಲೆಸಿದ್ದ ಶ್ರೀಮಾತೆ ಶಾರದಾ



ದೇವಿಯವರ ಅನುಮತಿಗಾಗಿ ಪ್ರಾರ್ಥಿಸಿದ್ದು. ಸ್ವಾಮಿ ಪ್ರೇಮಾನಂದರು ಹೋಗಿ ಕೇಳಿಕೊಂಡಾಗ ಶ್ರೀಮಾತೆ ತಮ್ಮ ಹೃತ್ಪೂರ್ವಕ ಒಪ್ಪಿಗೆ ನೀಡಿದರು. ಶ್ರೀಮಾತೆಯವರು ತಮ್ಮ ಭಕ್ತೆಯರ ಜತೆ ಷಷ್ಠಿಯ ದಿನ ಬಂದು, ಹತ್ತಿರದಲ್ಲಿದ್ದ ನೀಲಾಂಬರ ಬಾಬುವಿನ ತೋಟದ ಮನೆಯಲ್ಲಿ ಉಳಿದುಕೊಂಡರು. ಆ ದಿನ ಆವಾಹನಾ ಪೂಜೆಯಲ್ಲಿ ಭಾಗವಹಿಸಿದ್ದರಲ್ಲದೆ, ಉಳಿದ ಮೂರು ದಿನಗಳ ಪೂಜೆಗೂ ಬಂದಿದ್ದರು.

ಸಂನ್ಯಾಸಿಗಳು ಈ ರೀತಿಯ ಪೂಜೆಯನ್ನು ಆಚರಿಸುವುದು ನಿಯಮಬಾಹಿರವಾದುದರಿಂದ ಸ್ವಾಮಿಜಿ ಈ ಪೂಜೆಗಳನ್ನು ಶ್ರೀಮಾತೆಯವರ ಹೆಸರಿನಲ್ಲಿ ನೆರವೇರಿಸಬೇಕೆಂದು ಹೇಳಿದರು. ಇದೊಂದು ಸಂಪ್ರದಾಯವಾಗಿ, ಈ ದಿನಗಳಲ್ಲೂ ಆಚರಣೆಯಲ್ಲಿದೆ. ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಸಹಚಾರಿಣಿಯಾದ ಶ್ರೀಮಾತೆಯವರು ಆಧುನಿಕ ಯುಗದಲ್ಲಿ ಹೆಣ್ಣುಮಕ್ಕಳ ಜಾಗೃತಿಗಾಗಿಯೇ ಅವತರಿಸಿದ್ದಾರೆ ಎಂದು ಸ್ವಾಮಿಜಿ ಅರಿತಿದ್ದರು. ೧೮೯೪ರಲ್ಲಿ ಅಮೆರಿಕ ದಿಂದ ಸ್ವಾಮಿ ಶಿವಾನಂದರಿಗೆ ಬರೆದ ಪತ್ರದಲ್ಲಿ ಶ್ರೀಮಾತೆಯವರ ದೈವತ್ವದಲ್ಲಿ ತಮಗಿದ್ದ ನಂಬಿಕೆಯನ್ನು ಹೀಗೆ ವ್ಯಕ್ತಪಡಿಸಿದ್ದಾರೆ: "ಸೋದರ, ಜೀವಂತ ದುರ್ಗೆಯನ್ನು ಪೂಜಿಸುವುದು ಹೇಗೆಂದು ನಾನು ತೋರಿಸಿಕೊಡುತ್ತೇನೆ. ಆಗ ಮಾತ್ರ ನನ್ನ ಹೆಸರಿಗೆ ನಾನು ಯೋಗ್ಯ. ನಾನು ಒಂದು ತುಂಡು ಭೂಮಿಯನ್ನು ಖರೀದಿಸಿ ಜೀವಂತ ದುರ್ಗೆಯಾದ ಶ್ರೀಮಾತೆಯವರನ್ನು ಅಲ್ಲಿ ನೆಲೆಸುವಂತೆ ಮಾಡಿದ ಮೇಲೆಯೇ ನನಗೆ ವಿರಾಮ." ಸ್ವಾಮಿಜಿ ಮತ್ತು ಇತರ ಶ್ರೀರಾಮಕೃಷ್ಣ ಶಿಷ್ಯಕೋಟಿಗೆ ಪೂಜೆಯ ಸಂದರ್ಭದಲ್ಲಿ ಜೀವಂತ ದುರ್ಗೆಯಾದ ಶ್ರೀಮಾತೆಯವರು ಇದ್ದುದು ಅಪಾರ ಆನಂದವನ್ನು ಉಂಟುಮಾಡಿತು.

ಶ್ರೀಮಾತೆಯವರು ೧೯೧೨ ಮತ್ತು ೧೯೧೬ರಲ್ಲಿ ಬೇಲೂರು ಮಠದಲ್ಲಿ ನಡೆದ ದುರ್ಗಾಪೂಜೆಯಲ್ಲಿ ಭಾಗವಹಿಸಿದ್ದರು. ಇತರ ವರ್ಷಗಳಲ್ಲೂ ಅವರು ಬಂದಿರಬಹುದು. ಬಂದಾಗಲೆಲ್ಲ ಅವರು ಕೆಲವು ದಿನಗಳವರೆಗೆ ಇದ್ದು, ಸನ್ಯಾಸಿ ಹಾಗೂ ಗೃಹೀ ಭಕ್ತರನ್ನು ಆಶೀರ್ವದಿಸುತ್ತಿದ್ದರು.

**ಆಗಮನೀ**

ಹಿಂದೆ ತಿಳಿಸಿರುವಂತೆ ದುರ್ಗಾಪೂಜೆ ಹಬ್ಬದ ಹಿನ್ನೆಲೆಯಲ್ಲಿ ಹಲವಾರು ಪೌರಾಣಿಕ ಕತೆಗಳಿವೆ. ಅವುಗಳಲ್ಲಿ ಒಂದರ ಪ್ರಕಾರ ದೇವಿ ಉಮೆಯು ತನ್ನ ತವರುಮನೆಯಾದ ಕೈಲಾಸಕ್ಕೆ ನವರಾತ್ರಿಯ ಸಮಯದಲ್ಲಿ ಬರುತ್ತಾಳೆ. ಬಂಗಾಳದಲ್ಲಿ ಈ ಪುರಾಣಕತೆಯು ವಿಸ್ತಾರಗೊಂಡು, ದೇವಿಯು ದುರ್ಗಾಪೂಜೆಯ ಈ ಮೂರು ದಿನಗಳಲ್ಲಿ ತನ್ನ ಮಕ್ಕಳೆಲ್ಲರ ಮನೆಗೆ ಆಗಮಿಸುತ್ತಾಳೆ ಎಂಬ ನಂಬಿಕೆಯಾಗಿ ಬೆಳೆದುಬಂದಿದೆ. ಉಮೆಯ ತಾಯಿಯಾದ ಮೇನಕೆಯು ತನ್ನ ಮಗಳ ಮೇಲೆ ಇಟ್ಟಿರುವ ಗಾಢವಾದ ಮಾತೃಪ್ರೇಮ, ಕಾಳಜಿಗಳನ್ನು, ಕಣ್ಣಿಗೆ ಕಟ್ಟುವಂತೆ ಆಗಮನೀ ಹಾಡುಗಳು ಚಿತ್ರಿಸುತ್ತವೆ. ದೇವಿ ಉಮೆಯನ್ನು ತಮ್ಮ ಮನೆಗೆ ಸ್ವಾಗತಿಸಲು ಜನರು ಈ ಗೀತೆಗಳನ್ನು ಹಾಡುತ್ತಾರೆ. ಈ ಹಾಡುಗಳು ತಂದೆತಾಯಿಯರು ತಮ್ಮ ವಿವಾಹಿತ ಹೆಣ್ಣುಮಕ್ಕಳ ಮೇಲೆ ಇಟ್ಟಿರುವ ಪ್ರೇಮವನ್ನೂ ಪ್ರತಿಬಿಂಬಿಸುತ್ತವೆ.

ಆಗಮನೀ ಹಾಡುಗಳಲ್ಲಿನ ಮಾರ್ದವ ಭಾವಗಳಿಗಾಗಿ ಸ್ವಾಮಿ ವಿವೇಕಾನಂದರಿಗೆ ಅವು ಅಚ್ಚುಮೆಚ್ಚು. ಬೇಲೂರುಮಠದಲ್ಲಿನ ಮೊದಲನೇ ದುರ್ಗಾಪೂಜೆಯ ಷಷ್ಠಿಯ ದಿನದಂದು ಸ್ವಾಮಿಜಿ 'ಗಿರಿ ಗಣೇಶ್ ಅಮಾರ್ ಶುಭಕಾರಿ....' ಮೊದಲಾದ ಆಗಮನೀ ಹಾಡುಗಳನ್ನು ಹಾಡಿದ್ದರು. ಆಗಮನೀ ಗೀತೆಗಳನ್ನು ಹಾಡುವ ಸಂಪ್ರದಾಯ ಬೇಲೂರು ಮಠದಲ್ಲಿ ಇಂದಿಗೂ ಮುಂದುವರಿದಿದೆ.

**ಚಂಡೀಪಾಠ**

ನವರಾತ್ರಿಯ ಒಂಬತ್ತು ದಿನಗಳಲ್ಲಿ ಪ್ರತಿದಿನ ಬೆಳಗ್ಗೆ ಚಂಡೀ ಪಾರಾಯಣ ಮಾಡಲಾಗುತ್ತದೆ. ದೇವಿ ಚಂಡಿಯ ಪೂಜೆಯ ಜೊತೆಜೊತೆಗೇ ಪಾರಾಯಣ ನಡೆಯುತ್ತದೆ. ಬೇಲೂರು ಮಠದ ನಾಟ್ಯಮಂದಿರದ ಒಂದು ಮೂಲೆಯಲ್ಲಿ ಮೊದಲ ಐದು

ದಿನಗಳು, ಅನಂತರ ದುರ್ಗಾಮಂಟಪದ ಒಂದು ಮೂಲೆಯಲ್ಲಿ ಆರನೇ ದಿನದಿಂದ ನವಮಿಯ ತನಕ ಈ ಪಾರಾಯಣ ನಡೆಯುತ್ತದೆ.

**ಆರನೇ ದಿನ – ಷಷ್ಠಿ**

ದುರ್ಗಾಪೂಜೆಯ ಆರಂಭಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಆಚರಣೆಗಳನ್ನು ಮಾಡುವ ಅತಿ ಮುಖ್ಯವಾದ ದಿನವಿದು. ಈ ಆಚರಣೆಗಳು ಮುಖ್ಯವಾಗಿ ನಾಲ್ಕು: ಕಲ್ಪಾರಂಭ, ಬೋಧನ, ಅಧಿವಾಸ, ಆಮಂತ್ರಣ.

**ಕಲ್ಪಾರಂಭ:** ಈ ಆಚರಣೆ ಮುಂಜಾನೆ ನಡೆಯುತ್ತದೆ. ಮುಖ್ಯವಾಗಿ ಇದು ಸಂಕಲ್ಪ – ನಾಲ್ಕು ದಿನ ದುರ್ಗಾಪೂಜೆಯನ್ನು ಸರಿಯಾಗಿ ಮಾಡುವೆನೆಂದು ಖಚಿತವಾಗಿ ನಿರ್ಧರಿಸುವುದು. ತಾಮ್ರದ ಕೊಡದಲ್ಲಿ ನೀರು ತುಂಬಿ ಘಟಸ್ಥಾಪನೆಯನ್ನು ದುರ್ಗಾಮಂಟಪದ ಮೂಲೆಯೊಂದರಲ್ಲಿ ಮಾಡುವುದು ಮತ್ತು ದುರ್ಗೆ, ಚಂಡಿಯರಿಗೆ ಪೂಜೆ ಸಲ್ಲಿಸುವುದು ಈ ಆಚರಣೆಯ ಮುಖ್ಯ ಅಂಗಗಳು.

**ಬೋಧನ:** ಇದು ಸಂಜೆಯ ಆಚರಣೆ. ಬೋಧನ ಎಂದರೆ ಎಚ್ಚರಿಸುವುದು ಎಂದು ಅರ್ಥ. ಹಿಂದೆ ಹೇಳಿದಂತೆ, ಎಲ್ಲಾ ದೇವ ದೇವತೆಯರು ದಕ್ಷಿಣಾಯನದ ಆರು ತಿಂಗಳು ನಿದ್ರಿಸುತ್ತಾರೆಂಬುದು ಒಂದು ಪೌರಾಣಿಕ ನಂಬಿಕೆ. ಶರತ್ಕಾಲದ ದುರ್ಗಾಪೂಜೆ ದಕ್ಷಿಣಾಯನದ ಮಧ್ಯಭಾಗದಲ್ಲಿ ಬರುತ್ತದೆ. ಹೀಗಾಗಿ ದುರ್ಗೆಯನ್ನು ಎಚ್ಚರಗೊಳಿಸುವ ಅಗತ್ಯವಿದೆ. ಶ್ರೀರಾಮಚಂದ್ರನು ರಾವಣನ ಜತೆ ಯುದ್ಧ ಮಾಡುವ ಮೊದಲು ದುರ್ಗೆಯನ್ನು ಜಾಗೃತಿಗೊಳಿಸಿದ್ದು, ಹರಕೆಯನ್ನು ಹೇಳಿಕೊಂಡದ್ದನ್ನು ಹಿಂದೆಯೇ ವಿವರಿಸಿದೆ.

ಬಿಲ್ವವೃಕ್ಷದ ಅಡಿಯಲ್ಲಿ ತಾಮ್ರದ ಕಲಶದಲ್ಲಿ ನೀರನ್ನಿಟ್ಟು, ದೇವೀ ಪೂಜೆಯನ್ನು ಮಾಡಿ ಎಚ್ಚರಾಗುವಂತೆ ದೇವಿಯನ್ನು ಪ್ರಾರ್ಥಿಸುತ್ತಾರೆ. (ಈಗ ಬೇಲೂರುಮಠದಲ್ಲಿ ಒಂದು ಕಲಶದಲ್ಲಿ ಬಿಲ್ವದ ಕೊಂಬೆಯೊಂದನ್ನು ಇಡುತ್ತಾರೆ.)

**ಅಧಿವಾಸ ಮತ್ತು ಆಮಂತ್ರಣ:** ಬೋಧನದ ನಂತರ ಈ ಆಚರಣೆಗಳು ನಡೆಯುತ್ತವೆ. ಅಧಿವಾಸ ಎಂದರೆ ಆವಾಹನೆ. ಬೋಧನದಿಂದ ದೇವಿ ಎಚ್ಚರಾಗಿದ್ದಾಳೆ. ಎಚ್ಚರಗೊಂಡ ದೇವಿಯನ್ನು ಈಗ ಬಿಲ್ವವೃಕ್ಷ ಅಥವಾ ಬಿಲ್ವದ ಒಂದು ಕೊಂಬೆಯಲ್ಲಿ ಆವಾಹಿಸಲಾಗುತ್ತದೆ. ಈ ಆಚರಣೆಯಲ್ಲಿ ಮುಖ್ಯವಾದ ಹಂತಗಳು ಇವು

೧. ದುರ್ಗಾದೇವಿ ಹಾಗೂ ಬಿಲ್ವವೃಕ್ಷದ ಪೂಜೆ

೨ ಇಪ್ಪತ್ತಾರು ಮಂಗಳ ದ್ರವ್ಯಗಳನ್ನು ದುರ್ಗಾದೇವಿ ಹಾಗೂ ಬಿಲ್ವವೃಕ್ಷಕ್ಕೆ ಸ್ಪರ್ಶಿಸಿ ಪವಿತ್ರಗೊಳಿಸುವುದು.

೩. ಕೆಡುಕಿನಿಂದ ಪಾರು ಮಾಡಲು, ಪೂಜೆ ನಡೆಯುವ ಪೀಠದ ಸುತ್ತ ಕೆಂಪುದಾರವನ್ನು ಸುತ್ತುವುದು.

ಅಧಿವಾಸದ ಆಚರಣೆಯ ನಂತರ ಆಮಂತ್ರಣ (ಆಹ್ವಾನಿಸುವುದು.) ಸಪ್ತಮಿಯಿಂದ ಕೈಗೊಳ್ಳುವ ಪೂಜೆಯನ್ನು ಒಪ್ಪಿಸಿಕೊಳ್ಳಬೇಕೆಂದು ದೇವಿಯನ್ನು ಪ್ರಾರ್ಥಿಸುವುದು. ಇದಾದ ಮೇಲೆ ದೇವಿಯನ್ನು ಪಂಚೋಪಚಾರಗಳಿಂದ ಪೂಜಿಸಿ, ಆರತಿ ಮಾಡುವರು.

**ಸಪ್ತಮೀ ಪೂಜಾ**

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ್ದು ದೇವಿಯನ್ನು ಆವಾಹಿಸಲು ಒಂದು ಜೀವಂತ ಮಾಧ್ಯಮ ಅಗತ್ಯ ಎಂಬ ವಿಷಯ. ಜೀವಂತ ಮಾಧ್ಯಮದಲ್ಲಿ ದೇವಿ ಮೈದುಂಬುತ್ತಾಳೆ. ಷಷ್ಠಿ ದಿನದಂದು ದೇವಿಯನ್ನು ಬೇಲದ ಮರ ಅಥವಾ ಕೊಂಬೆಯ ಒಳಗೆ ಆವಾಹಿಸುತ್ತಾರೆ. ಸಪ್ತಮಿಯ ದಿನದಂದು ನವಪತ್ರಿಕಾ ಎಂದು ಕರೆಯುವ ಒಂಬತ್ತು ಗಿಡಗಳ ಗುಂಪಿನೊಳಗೆ ದೇವಿಯನ್ನು ಆವಾಹಿಸುತ್ತಾರೆ. ಬೇಲದ ಟೊಂಗೆಯೂ ಸೇರಿದ ಒಂಬತ್ತು ಗಿಡಗಳನ್ನು ಗುಂಪಾಗಿ ಕಟ್ಟಿ, ವಿಧ್ಯುಕ್ತವಾಗಿ ಸ್ನಾನ ಮಾಡಿಸುತ್ತಾರೆ. ಅನಂತರ ಕಿತ್ತಳೆ ಬಣ್ಣದ ಬಟ್ಟೆ ಸುತ್ತಿ, ದುರ್ಗೆಯ ಪ್ರತಿಮೆಯ ಬಲಗಡೆ ಮರದ ಪೀಠದ ಮೇಲೆ ಇಡುತ್ತಾರೆ. ಇದಾದ ಮೇಲೆ ಕನ್ನಡಿಯಲ್ಲಿ ದೇವಿಯನ್ನು ಆರಾಧಿಸಿ ವಿವಿಧ ಪರಿಕರಗಳ ಮೂಲಕ ಮಹಾಸ್ನಾನ ಮಾಡಿಸುತ್ತಾರೆ. ಅನಂತರ ಪುನಃ ಪ್ರತಿಮೆಯನ್ನು ಪವಿತ್ರಗೊಳಿಸಿ ಪ್ರಾಣಪ್ರತಿಷ್ಠೆ ನಡೆಯುತ್ತದೆ. ನಂತರ ದೇವಿಗೆ ಹದಿನಾರು ವಸ್ತುಗಳನ್ನು ಬಳಸಿ ಷೋಡಶೋಪಚಾರ ಸೇವೆ. ಇನ್ನಿತರ ದೇವತೆಗಳಿಗೆ, ದೇವಿಯು ಬಳಸುವ ವಸ್ತುಗಳಿಗೆ ಅನಂತರ ಪೂಜೆ ಸಲ್ಲಿಸುವರು. ಸಪ್ತಮಿಯ ಪೂಜೆ ದೇವಿಗೆ ಭೋಗ (ನೈವೇದ್ಯ) ಮತ್ತು ಆರತಿ ಸಲ್ಲಿಸುವುದರಿಂದ ಕೊನೆಗೊಳ್ಳುತ್ತದೆ.

**ಅಷ್ಟಮೀ ಪೂಜಾ**

ಸಪ್ತಮಿಯಂತೆ ಅಷ್ಟಮಿಯಂದೂ ದೇವಿಗೆ ಮಹಾಸ್ನಾನ, ಷೋಡಶೋಪಚಾರಗಳು ನಡೆಯುತ್ತವೆ. ಅದಲ್ಲದೆ ನವ ಶಕ್ತಿಯರನ್ನು ಒಂಬತ್ತು ವಿವಿಧ ಬಣ್ಣಗಳ ಧ್ವಜಗಳನ್ನು ಊರಿರುವ, ಒಂಬತ್ತು ಮಣ್ಣಿನ ಕುಂಡಗಳಲ್ಲಿ ಆವಾಹಿಸಿ ಪೂಜಿಸುತ್ತಾರೆ. ಅನಂತರ ಅರವತ್ತುನಾಲ್ಕು ಯೋಗಿನಿಯರ ಪೂಜೆ. ಇದಾದ ಮೇಲೆ ದೇವಿಯ ನವವಿಧ ಸ್ವರೂಪವಾದ ನವದುರ್ಗೆಯರು ಹಾಗೂ ಜಯಂತೀ, ಮಂಗಲಾ, ಕಾಳೀ, ಭದ್ರಕಾಳೀ, ಕಪಾಲಿನೀ, ದುರ್ಗಾ, ಶಿವಾ, ಕ್ಷಮಾ, ಧಾತ್ರೀ, ಸ್ವಾಹಾ ಮತ್ತು ಸ್ವಧಾ ಎಂಬ ದೇವಿಯರ ಪೂಜೆ. ಆಮೇಲೆ ಉಳಿದ ದೇವರುಗಳ ಪೂಜೆ. ಅಷ್ಟಮೀ ಪೂಜೆಯು ನೈವೇದ್ಯ, ಆರತಿಗಳಿಂದ ಕೊನೆಗೊಳ್ಳುವುದು.

**ಕುಮಾರೀ ಪೂಜಾ**

ಚಿಕ್ಕ ಹುಡುಗಿಯನ್ನು ದೇವಿಯೆಂದು ಭಾವಿಸಿ ಪೂಜಿಸು



ಬೇಲೂರು ಮಠದಲ್ಲಿ ಕುಮಾರೀ ಪೂಜಾ

ವುದು ಅಷ್ಟಮೀ ಪೂಜೆಯ ಭಾಗ. ಪರಿಶುದ್ಧ ಹೃದಯದ ಹುಡುಗಿಯಲ್ಲಿ ದೇವಿ ಹೆಚ್ಚಾಗಿ ಅಭಿವ್ಯಕ್ತಳಾಗುವಳೆಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಹೀಗಾಗಿ ಕುಮಾರೀಪೂಜೆಯನ್ನು ಆಚರಿಸುವರು. ದೇವಿಯ ಅಭಿವ್ಯಕ್ತ ರೂಪಗಳೆಂದು ಶ್ರೀರಾಮಕೃಷ್ಣರು ಹುಡುಗಿಯರಿಗೆ ತಲೆಬಾಗಿ ನಮಸ್ಕರಿಸುತ್ತಿದ್ದರು. ಮೊದಲ ಬಾರಿ ಬೇಲೂರುಮಠದಲ್ಲಿ ದುರ್ಗಾಪೂಜೆ ನಡೆದಾಗ ಸ್ವಾಮಿ ವಿವೇಕಾನಂದರು ಹಲವಾರು ಕುಮಾರಿಯರನ್ನು ಪೂಜಿಸಿದ್ದರು. ಈಗ ಒಬ್ಬಳು ಕುಮಾರಿಯನ್ನು ಮಾತ್ರ ಪೂಜಿಸಲಾಗುತ್ತದೆ. ದೇವಿಗೆ ಸಲ್ಲಿಸುವ ಎಲ್ಲ ರೀತಿಯ ನಿವೇದನೆಗಳನ್ನು ಕುಮಾರಿಗೂ ಸಲ್ಲಿಸಿ, ಕೊನೆಗೆ ಆರತಿ ಮಾಡಲಾಗುವುದು. ಹಿರಿಯ ಸಂನ್ಯಾಸಿಗಳೂ ಅವಳ ಪಾದಗಳಿಗೆ ಪುಷ್ಪಾಂಜಲಿ ಅರ್ಪಿಸುವರು.

### ಸಂಧಿ ಪೂಜಾ

ಅಷ್ಟಮಿಯ ಕೊನೆಯ ೨೪ ನಿಮಿಷಗಳು ಹಾಗೂ ನವಮಿಯ ಮೊದಲ ೨೪ ನಿಮಿಷಗಳು (ಚಾಂದ್ರಮಾನದ ಎರಡು ದಿನಗಳ ನಡುವಿನ ಒಟ್ಟು ೪೮ ನಿಮಿಷಗಳು) ಕೂಡಿ ಸಂಧಿಕಾಲ ಎಂಬ ದಿವ್ಯ ಮುಹೂರ್ತವಾಗುವುದು. ಇದು ಅತಿ ಪವಿತ್ರ ಕಾಲ ಎಂದು ನಂಬಿಕೆ. ಈ ಕಾಲದಲ್ಲಿ ದುರ್ಗೆಯನ್ನು ಚಾಮುಂಡಾ ಎಂದು (ಚಂಡ-ಮುಂಡರನ್ನು ಕೊಂದ ಕಾಳಿ) ಪೂಜಿಸುವರು. ಈ ಪೂಜೆ ಇಡೀ ನವರಾತ್ರಿಯಲ್ಲಿ ಅತಿ ಶ್ರೇಷ್ಠ ಎಂದು ಪರಿಗಣಿತವಾಗಿದ್ದು, ಅತ್ಯಂತ ಪ್ರಮುಖ ಆಚರಣೆಯಾಗಿದೆ.

ಈ ಪವಿತ್ರ ಸಂಧಿಕಾಲದಲ್ಲಿ ಪ್ರಾಣಿಬಲಿ ನೀಡುವುದು ಸಂಪ್ರದಾಯ. ೧೯೦೧ರಲ್ಲಿ ಬೇಲೂರುಮಠದಲ್ಲಿ ಮೊದಲ ದುರ್ಗಾಪೂಜೆ ನಡೆದಾಗ ಸ್ವಾಮಿ ವಿವೇಕಾನಂದರು ಇಂತಹ ಬಲಿ ನೀಡಲು ಒಪ್ಪಿದ್ದರು. ಆದರೆ ಶ್ರೀಮಾತೆಯವರು ಅದನ್ನು ವಿರೋಧಿಸಿದರು. ಹಾಗಾಗಿ ಬೇಲೂರುಮಠದಲ್ಲಿ ಎಂದೂ ಪ್ರಾಣಿ ಬಲಿ ನಡೆಯಲಿಲ್ಲ. ಅದರ ಬದಲು, ಸಾಂಕೇತಿಕವಾಗಿ ಒಂದು ಬಾಳೆ ಹಣ್ಣನ್ನು 'ಬಲಿ' ನೀಡಲಾಗುತ್ತದೆ.

### ನವಮೀ ಪೂಜಾ

ಅಷ್ಟಮಿಯಂತೆ ನವಮಿಯಲ್ಲೂ ದೇವಿಗೆ ಮಹಾಸ್ನಾನ, ಷೋಡಶೋಪಚಾರ ಪೂಜೆಗಳನ್ನು ಸಲ್ಲಿಸಲಾಗುತ್ತದೆ. ಜತೆಗೇ ಬಲಿ ಮತ್ತು ಹೋಮಗಳನ್ನು ನಡೆಸುತ್ತಾರೆ. ಬೇಲೂರುಮಠದಲ್ಲಿ ಬಲಿಯಾಗಿ ಬೂದುಗುಂಬಳ, ಸೌತೆಕಾಯಿ, ಕಬ್ಬುಗಳನ್ನು ಅರ್ಪಿಸುತ್ತಾರೆ. ತಾಂತ್ರಿಕ ಹಾಗೂ ವೈದಿಕ ಸಂಪ್ರದಾಯಗಳನ್ನು ಒಟ್ಟುಗೂಡಿಸಿ ಹೋಮವನ್ನು ಆಚರಿಸುತ್ತಾರೆ.

### ದಶಮೀ ಪೂಜಾ

ದಶಮಿಯ ಬೆಳಗ್ಗೆ ಸಂಕ್ಷಿಪ್ತ ಪೂಜೆ, ಶೀತಲ್ ಭೋಗ್ (ತಣ್ಣಗಿನ ನೈವೇದ್ಯ) ಮತ್ತು ಆರತಿಯನ್ನು ಮೊದಲು ಮಾಡಲಾಗುತ್ತದೆ. ಅನಂತರ ಪೂಜಾರಿ ಮತ್ತು ತಂತ್ರಧಾರಕರು ದೇವಿಯ ಪೀಠಕ್ಕೆ ಪ್ರದಕ್ಷಿಣೆ ಮಾಡಿ, ವಿಸರ್ಜನಾವಿಧಿಯನ್ನು ಆಚರಿಸುತ್ತಾರೆ. ಈ ವಿಧಿಯಲ್ಲಿ ನವಪತ್ರಿಕಾ ಹಾಗೂ ಪವಿತ್ರ ಪ್ರತಿಮೆಯಲ್ಲಿ ಆವಾಹಿತಳಾದ ದೇವಿಯನ್ನು ತನ್ನ ಲೋಕಕ್ಕೆ ಹಿಂದಿರುಗುವಂತೆ ಕೇಳಿಕೊಳ್ಳಲಾಗುತ್ತದೆ. ಹೀಗಿದ್ದರೂ ದೇವಿಯು ಭಕ್ತರ ಹೃದಯಗಳಲ್ಲಿ ನಿರಂತರವಾಗಿ ನೆಲೆನಿಲ್ಲುತ್ತಾಳೆ.

ಸಂಜೆ ನವಪತ್ರಿಕಾಸಹಿತ ದುರ್ಗೆಯ ಪ್ರತಿಮೆಯನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ, ನದಿಯಲ್ಲಿ ಮುಳುಗಿಸುತ್ತಾರೆ. ಆ ಜಾಗದಿಂದ ತೆಗೆದುಕೊಂಡ 'ಶಾಂತಿಜಲವನ್ನು ಭಕ್ತರೆಲ್ಲರ ಮೇಲೆ ಚಿಮುಕಿಸುವಾಗ ತಾವೆಲ್ಲ ಆ ತಾಯಿಯ ಮಕ್ಕಳೆಂಬ ಐಕ್ಯಭಾವದಲ್ಲಿ ಅವರೆಲ್ಲರೂ ಒಬ್ಬರನ್ನೊಬ್ಬರು ಆಲಿಂಗಿಸುತ್ತಾರೆ. ಹೀಗೆ ದುರ್ಗಾಪೂಜೆಯು ಕೊನೆಗೊಂಡು ಜನರ ಮನಸ್ಸಿನಲ್ಲಿ ಸಂತೋಷಕರ ನೆನಪುಗಳನ್ನು ಉಳಿಸುತ್ತದೆ.